# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1836 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ.ಪ್ರತಾಪ್ ಚಂದ್ರ ಶೆಟ್ಟಿ |
| ಉತ್ತರಿಸಬೇಕಾದ ದಿನಾಂಕ | : | 22.03.2021 |
| ಉತ್ತರಿಸಬೇಕಾದ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ ಸಂ | ವಿಷಯ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ನಾಗರಿಕ ಸಹಾಯವಾಣಿ ಕೇಂದ್ರಗಳನ್ನು ಯಾವಾಗ ಮತ್ತು ಎಲ್ಲಿ ಪ್ರಾರಂಭಿಸಲಾಗಿರುತ್ತದೆ: ಇವುಗಳ ಕಾರ್ಯಗಳು ಯಾವುವು: ಕಳೆದ ಮೂರು ವರ್ಷಗಳಲ್ಲಿ ಈ ಕೇಂದ್ರಗಳಿಗೆ ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಲಾದ ಅನುದಾನವೆಷ್ಟು: (ಜಿಲ್ಲಾವಾರು, ವರ್ಷವಾರು ಮಾಹಿತಿ ಒದಗಿಸುವುದು) | ರಾಜ್ಯದಲ್ಲಿ ನಾಗರಿಕ ಸಹಾಯವಾಣಿಯನ್ನು ದಿನಾಂಕ: 31/01/2017ರಿಂದ ಪ್ರಾರಂಭಿಸಲಾಗಿದೆ.<br><br>ರಾಜ್ಯದಲ್ಲಿ ಒಟ್ಟು 50 ನಾಗರಿಕ ಸಹಾಯವಾಣಿ ಕೇಂದ್ರಗಳನ್ನು ಪ್ರಾರಂಭಿಸಲಾಗಿರುತ್ತದೆ<br><br>ಜಿಲ್ಲಾವಾರು ಆಸ್ಪತ್ರೆಗಳ ವಿವರವನ್ನು **ಅನುಬಂಧ-1**ರಲ್ಲಿರಿಸಿದೆ.<br><br>**ಉದ್ದೇಶ ಹಾಗೂ ಇವುಗಳ ಕಾರ್ಯಗಳು:**<br><br>1) ಸಾರ್ವಜನಿಕ ಆಸ್ಪತ್ರೆಗಳಲ್ಲಿ ಲಭ್ಯವಿರುವ ಸೇವೆಗಳ ಬಗ್ಗೆ, ಸೇವೆ ಪಡೆಯಲು ಬರುವ ರೋಗಿಗಳು ಮತ್ತು ಅವರ ಕುಟುಂಬ ವರ್ಗದವರಿಗೆ ಅರಿವು ಮೂಡಿಸಿ, ಅಗತ್ಯ ಸೇವೆಗಳನ್ನು ಪಡೆದುಕೊಳ್ಳುವಂತೆ ಮಾಡುವುದು.<br>2) ಸರ್ಕಾರಿ ಆಸ್ಪತ್ರೆಗಳಲ್ಲಿ ಲಭ್ಯವಿರುವ ಉಚಿತ ಸೇವೆಗಳ ಬಗ್ಗೆ ಮತ್ತು ಶುಲ್ಕ ನೀಡಬೇಕಾದ ಸೇವೆಗಳ ಬಗ್ಗೆ ರೋಗಿಗಳಲ್ಲಿ ಜಾಗೃತಿ ಮೂಡಿಸುವುದು.<br>3). ಸಾರ್ವಜನಿಕ ಆಸ್ಪತ್ರೆಗಳಲ್ಲಿ ಸೇವೆಯನ್ನು ಉತ್ತಮ ಪಡಿಸಲು, ರೋಗಿಗಳ, ಸಿಬ್ಬಂದಿಗಳ ಸಮಸ್ಯೆಗಳನ್ನು ಪಡೆದು ಆಡಳಿತ ವೈದ್ಯಾಧಿಕಾರಿಗಳ ಗಮನಕ್ಕೆ ತರುವುದು.<br>4) ರೋಗಿಗಳಿಗೆ ಮತ್ತು ಅವರ ಕುಟುಂಬದವರಿಗೆ, ಆಸ್ಪತ್ರೆಗಳಲ್ಲಿ ಲಭ್ಯವಿರುವ ಸೇವೆಗಳ ವಿವರ, ಲಭ್ಯವಿರುವ ಸ್ಥಳ, ಸಿಬ್ಬಂದಿ, ದಾಖಲಾತಿ, ತುರ್ತು ಸಾರಿಗೆ ವ್ಯವಸ್ಥೆ ಮುಂತಾದ ಸೇವೆಗಳನ್ನು ಪಡೆದುಕೊಳ್ಳಲು ಸಹಕರಿಸುವುದು.<br>5) ರೋಗಿಗಳು ಮತ್ತು ಅವರ ಸಂಬಂಧಿಕರು ಹಾಗೂ ಆಸ್ಪತ್ರೆ ಸಿಬ್ಬಂದಿಯ ನಡುವಿನ ಘರ್ಷಣೆಗಳನ್ನು ಕಡಿಮೆ ಮಾಡುವುದು.<br>6) ಒಳರೋಗಿ, ಹೊರರೋಗಿ ಮತ್ತು ಇತರೆ ಸೇವೆಗಳನ್ನು ಪಡೆದುಕೊಳ್ಳಲು ಬೇಕಾದ ಸಮಯವನ್ನು ಕಡಿತಗೊಳಿಸುವುದು.<br>7) ರೋಗಿಗಳು ಮತ್ತು ಅವರ ಸಂಬಂಧಿಕರ ದೂರುಗಳನ್ನು ದಾಖಲಿಸಿಕೊಂಡು ಆಸ್ಪತ್ರೆಗಳ ಆಡಳಿತ ವೈದ್ಯಾಧಿಕಾರಿಗಳ ಗಮನಕ್ಕೆ ತರುವುದು.<br>8) ನಗರ/ಪಟ್ಟಣ ಪ್ರದೇಶಗಳ, ಕೊಳಚೆ ಪ್ರದೇಶಗಳು, ಹಿಂದುಳಿದ ವರ್ಗದವರು, ಮುಂತಾದವರು ವಾಸಿಸುವ ಸ್ಥಳಗಳಿಗೆ ನಾಗರಿಕ ಸಹಾಯವಾಣಿ ಸಿಬ್ಬಂದಿ ಭೇಟಿ ನೀಡಿ ಆಸ್ಪತ್ರೆಗಳಲ್ಲಿ ಲಭ್ಯವಿರುವ ಸೇವೆಗಳ ಬಗ್ಗೆ ಅರಿವು ಮೂಡಿಸಿ, ಸರ್ಕಾರಿ ಆಸ್ಪತ್ರೆಗಳ ಸೇವೆಗಳನ್ನು ಹೆಚ್ಚಿನ ರೀತಿಯಲ್ಲಿ ಬಳಸಿಕೊಳ್ಳಲು ಪ್ರೋತ್ಸಾಹಿಸುವುದು.<br>9) ಸಾರ್ವಜನಿಕ ಆಸ್ಪತ್ರೆ ಸೇವೆಗಳಲ್ಲಿ ಪಾರದರ್ಶಕತೆ ಮತ್ತು ಸಿಬ್ಬಂದಿಯ ಜವಾಬ್ದಾರಿ ಹೆಚ್ಚಿಸಿ ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸುವುದು.<br>10) ಆಶಾ ಮತ್ತು ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಜೊತೆ ಸಂಪರ್ಕಸಾಧಿಸಿ ಸಂಯೋಜನೆಯೊಂದಿಗೆ ಆರೋಗ್ಯದ ನಿಮಿತ್ತ ತುರ್ತು ಅಗತ್ಯ ಸೇವೆ ಅವಶ್ಯಕವಿರುವ ರೋಗಿಗಳಿಗೆ (ವಿಶೇಷವಾಗಿ ಗರ್ಭಿಣಿ ಹಾಗೂ ತಾಯಂದಿರು) ನಿರ್ದಿಷ್ಟವಾದ ಸೇವೆಗಳನ್ನು ಆಸ್ಪತ್ರೆಯಲ್ಲಿ ಶೀಘ್ರದಲ್ಲೇ ದೊರಕುವಂತೆ ಮಾಡಲು ಕ್ರಮವಹಿಸುವುದು. |

...2

| | | |
|---|---|---|
| | | 11) ಆಸ್ಪತ್ರೆಯಲ್ಲಿ ನೀಡುವ ಸೇವೆಗಳ ಕುರಿತು ಹಾಗೂ ಆರೋಗ್ಯ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಕುರಿತು ಆಸ್ಪತ್ರೆಯ ವ್ಯಾಪ್ತಿಯ ಪ್ರದೇಶದಲ್ಲಿ ಮತ್ತು ಆಸ್ಪತ್ರೆಯಲ್ಲಿ ಬರುವ ರೋಗಿಗಳಿಗೆ ಐ.ಇ.ಸಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.<br>12) ಆಸ್ಪತ್ರೆಯ ಸಿಬ್ಬಂದಿಗಳು ಮತ್ತು ಸಾರ್ವಜನಿಕರ ಮಧ್ಯೆ ಇರುವ ವೈಷಮ್ಯ ಹಾಗೂ ತಾರತಮ್ಯಗಳನ್ನು ಹೋಗಲಾಡಿಸಲು ಕ್ರಮವಹಿಸುವುದು ಮತ್ತು ಆಸ್ಪತ್ರೆಯ ಸಿಬ್ಬಂದಿಗಳು ನಾಗರಿಕರಿಗೆ ಉತ್ತಮ ರೀತಿಯಲ್ಲಿ ಸೇವೆಗಳನ್ನು ನೀಡಲು ಕ್ರಮವಹಿಸುವುದು.<br>13) ಆಸ್ಪತ್ರೆಯಲ್ಲಿ ನೀಡುವ ಸೌಲಭ್ಯಗಳನ್ನು ನಾಗರಿಕರಲ್ಲಿ ಪ್ರಚಾರಪಡಿಸಿ ಆಸ್ಪತ್ರೆಯ ಬಗ್ಗೆ ಸಾರ್ವಜನಿಕರಲ್ಲಿ ಉತ್ತಮ ಅಭಿಪ್ರಾಯ ಮೂಡುವಂತೆ ಮಾಡಲು ಕ್ರಮವಹಿಸುವುದು.<br><br>ವಾರ್ಷಿಕ ಜಿಲ್ಲಾವಾರು ನಾಗರಿಕ ಸಹಾಯವಾಣಿ ಕೇಂದ್ರಗಳಿಗೆ (CHD) ನೀಡಿರುವ ಅನುದಾನದ ವಿವರಗಳನ್ನು **ಅನುಬಂಧ-2**ರಲ್ಲಿರಿಸಿದೆ. (ಎನ್.ಹೆಚ್.ಎಂ ಅಡಿಯಲ್ಲಿ ಕೇಂದ್ರ ಸರ್ಕಾರದಿಂದ ಶೇ. 60% ರಷ್ಟು ಹಾಗೂ ರಾಜ್ಯ ಸರ್ಕಾರದಿಂದ ಶೇ. 40% ರಷ್ಟು ಅನುದಾನವನ್ನು ನೀಡಲಾಗುತ್ತಿದೆ). |
| ಆ) | ನಾಗರಿಕರಿಗೆ, ರೋಗಿಗಳಿಗೆ ಮತ್ತು ವೈದ್ಯಕೀಯ ಸಿಬ್ಬಂದಿಗಳೊಂದಿಗೆ ಸಮನ್ವಯ ಸಾಧಿಸುವ ಉದ್ದೇಶದಿಂದ ಮಾನವ ಸಂಪನ್ಮೂಲ ಕೇಂದ್ರಿತವಾಗಿರುವ ಈ ಕೇಂದ್ರಗಳನ್ನು ಸ್ಥಗಿತಗೊಳಿಸುವ ಉದ್ದೇಶ ಸರ್ಕಾರದ ಮುಂದಿದೆಯೇ: ಹೌದಾದಲ್ಲಿ, ಕಾರಣವೇನು: ಈ ಸಹಾಯ ಕೇಂದ್ರದ ಕಾರ್ಯಗಳನ್ನು 104 ಸಹಾಯವಾಣಿಯೊಂದಿಗೆ ವಿಲೀನಗೊಳಿಸಲು ಮತ್ತು ಇ-ಆಸ್ಪತ್ರೆಯಡಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವುದು ನಿಜವೇ: | ಆರ್ಥಿಕ ವರ್ಷ 2021-22ನೇ ಸಾಲಿನಿಂದ ನಾಗರಿಕ ಸಹಾಯವಾಣಿ ಕೇಂದ್ರಗಳನ್ನು ಮುಂದುವರೆಸದಿರಲು ಕೇಂದ್ರ ಸರ್ಕಾರವು ಎನ್.ಪಿ.ಸಿ.ಸಿ (National Programme Coordination Committee) ಸಭೆಯಲ್ಲಿ ಸೂಚಿಸಲಾಗಿರುತ್ತದೆ.<br><br>2020-21ನೇ ಸಾಲಿನಿಂದ ಇ-ಆಸ್ಪತ್ರೆ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲೂ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ. ಪ್ರತೀ ತಾಲ್ಲೂಕು ಆಸ್ಪತ್ರೆಗೆ 5 ಜನ ಹಾಗೂ ಜಿಲ್ಲಾ ಆಸ್ಪತ್ರೆಗೆ 10 ಜನ ಗಣಕಯಂತ್ರ ಸಹಾಯಕರನ್ನು ನೇಮಿಸಲಾಗುತ್ತಿದ್ದು, ಈ ಕಾರ್ಯಕ್ರಮದಡಿಯಲ್ಲಿ "ಮೇರಾ ಆಸ್ಪತ್ತಾಲ್" ಯೋಜನೆಯನ್ನು ಜಾರಿಗೊಳಿಸುವದಲ್ಲದೆ ಸದರಿ ಕಾರ್ಯಕ್ರಮವನ್ನು '104 ಆರೋಗ್ಯ ಸಹಾಯವಾಣಿ' ಯೊಂದಿಗೆ ತಂತ್ರಜ್ಞಾನ ಜೋಡಣೆ ಮಾಡಲಾಗಿದೆ. ಇದರಿಂದ ಸಾರ್ವಜನಿಕರು ತಮ್ಮ ಅಹವಾಲುಗಳನ್ನು '104 ಆರೋಗ್ಯ ಸಹಾಯವಾಣಿ' ಹಾಗೂ "ಮೇರಾ ಆಸ್ಪತ್ತಾಲ್" ಯೋಜನೆಯಡಿಯಲ್ಲಿ ಸಲ್ಲಿಸಬಹುದಾಗಿರುತ್ತದೆ.<br><br>'104 ಆರೋಗ್ಯ ಸಹಾಯವಾಣಿ' ಹಾಗೂ "ಮೇರಾ ಆಸ್ಪತ್ತಾಲ್" ಕಾರ್ಯಕ್ರಮವು ಈಗಾಗಲೇ ಎಲ್ಲಾ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪಿ.ಪಿ.ಪಿ ಮಾದರಿಯ ನಾಗರಿಕ ಸಹಾಯವಾಣಿ ಕೇಂದ್ರಗಳನ್ನೂ ಪುನಃ ಮುಂದುವರೆಸಿದಲ್ಲಿ, ಮೇಲ್ಕಂಡ 50 ಆಸ್ಪತ್ರೆಗಳಲ್ಲಿ ಸದರಿ ಕಾರ್ಯಕ್ರಮವನ್ನು ಪುನಃ ನಕಲು ಮಾಡಿದಂತಾಗುತ್ತದೆ. ಆದ್ದರಿಂದ ಇ-ಆಸ್ಪತ್ರೆ ಮತ್ತು '104 ಆರೋಗ್ಯ ಸಹಾಯವಾಣಿ' ತಂತ್ರಜ್ಞಾನವನ್ನು ಉಪಯೋಗಿಸಿ ಸಾರ್ವಜನಿಕರಿಗೆ ಆಸ್ಪತ್ರೆ ಸೌಲಭ್ಯಗಳ ಮಾಹಿತಿ ಮತ್ತು ಅಹವಾಲನ್ನು ಸ್ವೀಕರಿಸಲು ಕ್ರಮವಹಿಸಲಾಗುತ್ತಿದೆ. |

...3

| | | |
|---|---|---|
| ಇ) | ಈ ನಾಗರಿಕ ಸಹಾಯ ಕೇಂದ್ರದ ಸ್ಥಾಪನೆಯಿಂದ ಆರೋಗ್ಯ ಕ್ಷೇತ್ರದಲ್ಲಿ ಯಾವ ಪ್ರಯೋಜನಗಳನ್ನು ಗುರುತಿಸಲಾಗಿರುತ್ತದೆ; ಬದಲಿ ವ್ಯವಸ್ಥೆಯಿಂದ ಯಾವ ಹೆಚ್ಚಿನ ಪ್ರಯೋಜನವನ್ನು ಗುರುತಿಸಲಾಗಿದೆ; ರೋಗಿಗಳೊಂದಿಗೆ ಯಾಂತ್ರಿಕತೆಯ ಬದಲಿಗೆ ಮಾನವ ಸಂಪನ್ಮೂಲ ಕೇಂದ್ರಿತವಾಗಿ ಸಮನ್ವಯತೆಯನ್ನು ಹೆಚ್ಚು ಸಮರ್ಪಕವಾಗಿ ನಿರ್ವಹಿಸುವ ನಾಗರಿಕ ಸಹಾಯವಾಣಿ ಕೇಂದ್ರಗಳನ್ನು ಮುಂದುವರಿಸಲು ಇರುವ ತೊಡಕುಗಳು ಯಾವುವು; ಇವುಗಳನ್ನು ಮುಂದುವರಿಸಲಾಗುವುದೇ? | ನಾಗರಿಕ ಸಹಾಯವಾಣಿ ಸೇವೆ ಒದಗಿಸುವ ಸೇವಾದಾರರು ಬೆಳಿಗ್ಗೆ 9:00 ಗಂಟೆಯಿಂದ ಸಂಜೆ 4:30ರವರೆಗೆ ರೋಗಿಗಳಿಗೆ ಮತ್ತು ಅವರ ಸಂಬಂಧಿಕರಿಗೆ ಸೇವೆ ಪಡೆದುಕೊಳ್ಳಲು ಸಹಕರಿಸಿ, ಅವರ ಕುಂದು ಕೊರತೆಗಳನ್ನು ಅರಿತು, ಸದರಿ ವಿಷಯಗಳನ್ನು ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿಗಳ ಗಮನಕ್ಕೆ ತಂದು ಸೇವೆಯನ್ನು ಉತ್ತಮ ಪಡಿಸಲು ಸಹಕರಿಸುವುದು. ಮತ್ತು ನಾಗರಿಕ ಸಹಾಯವಾಣಿಯ ವ್ಯವಸ್ಥಾಪಕರು ಪ್ರತಿ 15 ದಿನಗಳಿಗೊಮ್ಮೆ, ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿಗಳ ಜೊತೆ ಸಭೆ ನಡೆಸಿ ಆಸ್ಪತ್ರೆಯ ಅಥವಾ ರೋಗಿಗಳ ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಡಲು ಶ್ರಮಿಸುವರು.<br><br>ಬದಲಿ ವ್ಯವಸ್ಥೆಯಿಂದ ಸಾರ್ವಜನಿಕರಿಗೆ ಉಚಿತ '104 ಆರೋಗ್ಯ ಸಹಾಯವಾಣಿ' ಯಿಂದ ಅವರ ಅಹವಾಲುಗಳನ್ನು ನೇರವಾಗಿ ಸ್ವೀಕರಿಸಲಾಗುವುದು ಮತ್ತು ಸದರಿ ಅಹವಾಲುಗಳನ್ನು ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ವಿಶ್ಲೇಷಿಸಿ ತ್ವರಿತವಾಗಿ ಸ್ಪಂದಿಸಲಾಗುವುದು. ಇದರೊಂದಿಗೆ "ಮೇರಾ ಆಸ್ಪತ್ತಾಲ್" ಯೋಜನೆಯಡಿಯಲ್ಲಿ ಗುಣಮಟ್ಟದ ಸೇವೆಯನ್ನು ಸಾರ್ವಜನಿಕರಿಗೆ / ರೋಗಿಗಳಿಗೆ ಒದಗಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ರೋಗಿಗಳು ನೀಡಿರುವ ದೂರವಾಣಿ ಸಂಖ್ಯೆಗೆ ಕರೆಯನ್ನು ಮಾಡಿ ತೃಪ್ತಿಕರ ಸೇವೆ ಪಡೆದಿರುವ ಬಗ್ಗೆ ವಿಚಾರಣೆ ನಡೆಸಲಾಗುವುದು ಹಾಗೂ ದೂರು ಅಥವಾ ಅಹವಾಲುಗಳು ಇದ್ದಲ್ಲಿ ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ವಿಶ್ಲೇಷಿಸಿ ತ್ವರಿತವಾಗಿ ಸ್ಪಂದಿಸಲಾಗುವುದು.<br><br>ಇ-ಆಸ್ಪತ್ರೆಯಡಿಯಲ್ಲಿ ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಗಣಕಯಂತ್ರ ಸಹಾಯಕರು, ಸಿ.ಹೆಚ್.ಡಿ ಸಹಾಯಕರು ನಿರ್ವಹಿಸುವ ಎಲ್ಲಾ ಸೇವೆಗಳನ್ನು ನೀಡಲು ಕ್ರಮವಹಿಸುತ್ತಿರುವುದರಿಂದ ಸದರಿ ಕಾರ್ಯಕ್ರಮದ ಸೇವೆಗಳು ಮತ್ತೊಮ್ಮೆ 50 ಆಸ್ಪತ್ರೆಗಳಲ್ಲಿ ನಕಲು (Duplicate) ಆಗಲಿದ್ದು, ಅನುದಾನ ವೆಚ್ಚವು ದುರ್ಬಳಿಕೆ ಆಗುವುದರಿಂದ ನಾಗರಿಕ ಸಹಾಯವಾಣಿ ಕೇಂದ್ರಗಳನ್ನು ಮುಂದುವರೆಸಲು ಸಾಧ್ಯವಿರುವುದಿಲ್ಲ. |

**ಸಂಖ್ಯೆ:ಆಕುಕ 26 ಎಸ್.ಟಿ.ಕ್ಯೂ 2021**

(ಡಾ॥ ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

## ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1836ಕ್ಕೆ ಅನುಬಂಧ-1

| ಜಿಲ್ಲೆಗಳ ಹೆಸರು | ಸೇವೆ ನೀಡುತ್ತಿರುವ ಆಸ್ಪತ್ರೆಗಳ ವಿವರ |
|---|---|
| ಬಾಗಲಕೋಟೆ | ಜಿಲ್ಲಾ ಆಸ್ಪತ್ರೆ ಬಾಗಲಕೋಟೆ |
| | ತಾಲ್ಲೂಕು ಆಸ್ಪತ್ರೆ, ಜಮಖಂಡಿ |
| ವಿಜಯಪುರ | ಜಿಲ್ಲಾ ಆಸ್ಪತ್ರೆ, ವಿಜಯಪುರ |
| ಬೀದರ್ | ತಾಲ್ಲೂಕು ಆಸ್ಪತ್ರೆ, ಬಸವಕಲ್ಯಾಣ |
| ಕಲ್ಬುರ್ಗಿ | ಜಿಲ್ಲಾ ಆಸ್ಪತ್ರೆ, ಕಲಬುರ್ಗಿ |
| | ತಾಲ್ಲೂಕು ಆಸ್ಪತ್ರೆ, ಸೇಡಂ |
| ಯಾದಗಿರಿ | ಜಿಲ್ಲಾ ಆಸ್ಪತ್ರೆ, ಯಾದಗಿರಿ |
| ಕೊಪ್ಪಳ | ಜಿಲ್ಲಾ ಆಸ್ಪತ್ರೆ, ಕೊಪ್ಪಳ |
| | ತಾಲ್ಲೂಕು ಆಸ್ಪತ್ರೆ, ಗಂಗಾವತಿ |
| | ತಾಲ್ಲೂಕು ಆಸ್ಪತ್ರೆ, ಕುಷ್ಟಗಿ |
| ರಾಯಚೂರು | ತಾಲ್ಲೂಕು ಆಸ್ಪತ್ರೆ, ಲಿಂಗಸಗೂರು |
| | ತಾಲ್ಲೂಕು ಆಸ್ಪತ್ರೆ, ಸಿಂದನೂರು |
| ಬಳ್ಳಾರಿ | ಜಿಲ್ಲಾ ಆಸ್ಪತ್ರೆ, ಬಳ್ಳಾರಿ |
| | ತಾಲ್ಲೂಕು ಆಸ್ಪತ್ರೆ, ಹೊಸಪೇಟೆ |
| ಬೆಳಗಾವಿ | ಜಿಲ್ಲಾ ಆಸ್ಪತ್ರೆ, ಬೆಳಗಾವಿ |
| | ತಾಲ್ಲೂಕು ಆಸ್ಪತ್ರೆ, ಚಿಕ್ಕೋಡಿ |
| | ತಾಲ್ಲೂಕು ಆಸ್ಪತ್ರೆ, ಗೋಕಾಕ್ |
| | ತಾಲ್ಲೂಕು ಆಸ್ಪತ್ರೆ, ಸೌದತ್ತಿ |
| ಉತ್ತರ ಕನ್ನಡ | ಜಿಲ್ಲಾ ಆಸ್ಪತ್ರೆ, ಉತ್ತರ ಕನ್ನಡ |
| | ತಾಲ್ಲೂಕು ಆಸ್ಪತ್ರೆ, ಶಿರಸಿ |
| ಧಾರವಾಡ | ಜಿಲ್ಲಾ ಆಸ್ಪತ್ರೆ, ಧಾರವಾಡ |
| ಗದಗ | ಜಿಲ್ಲಾ ಆಸ್ಪತ್ರೆ, ಗದಗ |
| ಹಾವೇರಿ | ಜಿಲ್ಲಾ ಆಸ್ಪತ್ರೆ, ಹಾವೇರಿ |
| ಚಿತ್ರದುರ್ಗ | ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ |
| ದಾವಣಗೆರೆ | ಜಿಲ್ಲಾ ಆಸ್ಪತ್ರೆ, ದಾವಣಗೆರೆ |
| | ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ, ದಾವಣಗೆರೆ |
| | ತಾಲ್ಲೂಕು ಆಸ್ಪತ್ರೆ, ಹರಿಹರ |
| ಶಿವಮೊಗ್ಗ | ತಾಲ್ಲೂಕು ಆಸ್ಪತ್ರೆ, ಶಿಕಾರಿಪುರ |
| | ತಾಲ್ಲೂಕು ಆಸ್ಪತ್ರೆ, ಸಾಗರ |
| ಉಡುಪಿ | ಜಿಲ್ಲಾ ಆಸ್ಪತ್ರೆ, ಉಡುಪಿ |
| | ತಾಲ್ಲೂಕು ಆಸ್ಪತ್ರೆ, ಕುಂದಾಪುರ |
| ದಕ್ಷಿಣ ಕನ್ನಡ | ಲೇಡಿ ಗೋಷನ್ ಆಸ್ಪತ್ರೆ, ಮಂಗಳೂರು |
| | ವೆನ್‌ಲಾಕ್ ಆಸ್ಪತ್ರೆ, ಮಂಗಳೂರು. |
| ಚಿಕ್ಕಮಗಳೂರು | ಜಿಲ್ಲಾ ಆಸ್ಪತ್ರೆ, ಚಿಕ್ಕಮಗಳೂರು |
| | ತಾಲ್ಲೂಕು ಆಸ್ಪತ್ರೆ, ತರಿಕೆರೆ |
| ಕೊಡಗು | ಜಿಲ್ಲಾ ಆಸ್ಪತ್ರೆ, ಕೊಡಗು |
| ಹಾಸನ | ತಾಲ್ಲೂಕು ಆಸ್ಪತ್ರೆ, ಹೊಳೆನರಸಿಪುರ |
| ತುಮಕೂರು | ಜಿಲ್ಲಾ ಆಸ್ಪತ್ರೆ, ತುಮಕೂರು |
| | ತಾಲ್ಲೂಕು ಆಸ್ಪತ್ರೆ, ಪಾವಗಡ |
| | ತಾಲ್ಲೂಕು ಆಸ್ಪತ್ರೆ, ಶಿರ |
| ಮೈಸೂರು | ತಾಲ್ಲೂಕು ಆಸ್ಪತ್ರೆ, ಹೆಗ್ಗಡದೇವನಕೋಟೆ |
| ಚಾಮರಾಜನಗರ | ಜಿಲ್ಲಾ ಆಸ್ಪತ್ರೆ, ಚಾಮರಾಜನಗರ |
| ಬೆಂಗಳೂರು ಗ್ರಾಮಾಂತರ | ತಾಲ್ಲೂಕು ಆಸ್ಪತ್ರೆ, ದೊಡ್ಡಬಳ್ಳಾಪುರ |
| ರಾಮನಗರ | ಜಿಲ್ಲಾ ಆಸ್ಪತ್ರೆ, ರಾಮನಗರ |
| ಚಿಕ್ಕಬಳ್ಳಾಪುರ | ಜಿಲ್ಲಾ ಆಸ್ಪತ್ರೆ, ಚಿಕ್ಕಬಳ್ಳಾಪುರ |
| | ತಾಲ್ಲೂಕು ಆಸ್ಪತ್ರೆ, ಚಿಂತಾಮಣಿ |
| | ತಾಲ್ಲೂಕು ಆಸ್ಪತ್ರೆ, ಗೌರಿಬಿದನೂರು |
| ಕೋಲಾರ | ಜಿಲ್ಲಾ ಆಸ್ಪತ್ರೆ, ಕೋಲಾರ |
| | ತಾಲ್ಲೂಕು ಆಸ್ಪತ್ರೆ, ಮುಳಬಾಗಿಲು |
| | ಕೆ.ಜಿ.ಎಫ್ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ |

## ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1836ಕ್ಕೆ ಅನುಬಂಧ-2

| ಕ್ರ ಸಂ. | ಜಿಲ್ಲೆಗಳು | ಪ್ರತಿ CHD ಘಟಕಕ್ಕೆ ನೀಡುವ ಅನುದಾನ (ವಾರ್ಷಿಕ) | ಜಿಲ್ಲಾವಾರು CHD ಗಳ ಸಂಖ್ಯೆ | ವಾರ್ಷಿಕ ಜಿಲ್ಲಾವಾರು ಅನುದಾನ ನೀಡಿರುವ ವಿವರ (ರೂ. ಲಕ್ಷಗಳಲ್ಲಿ ಪ್ರತಿ ಆರ್ಥಿಕ ವರ್ಷ) | | | |
|---|---|---|---|---|---|---|---|
| | | | | 2017-18 | 2018-19 | 2019-20 | 2020-21 |
| 1 | ಬಾಗಲಕೋಟೆ | 17.28 | 2 | 34.56 | 34.56 | 34.56 | 34.56 |
| 2 | ಧಾರವಾಡ | 17.28 | 1 | 17.28 | 17.28 | 17.28 | 17.28 |
| 3 | ಗದಗ | 17.28 | 1 | 17.28 | 17.28 | 17.28 | 17.28 |
| 4 | ದಕ್ಷಿಣ ಕನ್ನಡ | 17.28 | 2 | 34.56 | 34.56 | 34.56 | 34.56 |
| 5 | ಬೀದರ್ | 17.28 | 1 | 17.28 | 17.28 | 17.28 | 17.28 |
| 6 | ವಿಜಯಪುರ | 17.28 | 1 | 17.28 | 17.28 | 17.28 | 17.28 |
| 7 | ಕೋಲಾರ | 17.28 | 3 | 51.84 | 51.84 | 51.84 | 51.84 |
| 8 | ಚಿಕ್ಕಬಳ್ಳಾಪುರ | 17.28 | 3 | 51.84 | 51.84 | 51.84 | 51.84 |
| 9 | ಬೆಂಗಳೂರು (ಗ್ರಾ) | 17.28 | 1 | 17.28 | 17.28 | 17.28 | 17.28 |
| 10 | ರಾಮನಗರ | 17.28 | 1 | 17.28 | 17.28 | 17.28 | 17.28 |
| 11 | ಕಲ್ಬುರ್ಗಿ | 17.28 | 2 | 34.56 | 34.56 | 34.56 | 34.56 |
| 12 | ಯಾದಗಿರಿ | 17.28 | 1 | 17.28 | 17.28 | 17.28 | 17.28 |
| 13 | ಕೊಪ್ಪಳ | 17.28 | 3 | 51.84 | 51.84 | 51.84 | 51.84 |
| 14 | ರಾಯಚೂರು | 17.28 | 2 | 34.56 | 34.56 | 34.56 | 34.56 |
| 15 | ಬಳ್ಳಾರಿ | 17.28 | 2 | 34.56 | 34.56 | 34.56 | 34.56 |
| 16 | ಬೆಳಗಾವಿ | 17.28 | 4 | 69.12 | 69.12 | 69.12 | 69.12 |
| 17 | ಚಿಕ್ಕಮಗಳೂರು | 17.28 | 2 | 34.56 | 34.56 | 34.56 | 34.56 |
| 18 | ಉತ್ತರ ಕನ್ನಡ | 17.28 | 2 | 34.56 | 34.56 | 34.56 | 34.56 |
| 19 | ಹಾವೇರಿ | 17.28 | 1 | 17.28 | 17.28 | 17.28 | 17.28 |
| 20 | ಚಿತ್ರದುರ್ಗ | 17.28 | 1 | 17.28 | 17.28 | 17.28 | 17.28 |
| 21 | ದಾವಣಗೆರೆ | 17.28 | 3 | 51.84 | 51.84 | 51.84 | 51.84 |
| 22 | ಶಿವಮೊಗ್ಗ | 17.28 | 2 | 34.56 | 34.56 | 34.56 | 34.56 |
| 23 | ಉಡುಪಿ | 17.28 | 2 | 34.56 | 34.56 | 34.56 | 34.56 |
| 24 | ಮೈಸೂರು | 17.28 | 1 | 17.28 | 17.28 | 17.28 | 17.28 |
| 25 | ಚಾಮರಾಜನಗರ | 17.28 | 1 | 17.28 | 17.28 | 17.28 | 17.28 |
| 26 | ಕೊಡಗು | 17.28 | 1 | 17.28 | 17.28 | 17.28 | 17.28 |
| 27 | ಹಾಸನ | 17.28 | 1 | 17.28 | 17.28 | 17.28 | 17.28 |
| 28 | ತುಮಕೂರು | 17.28 | 3 | 51.84 | 51.84 | 51.84 | 51.84 |
| **Total** | | **17.28** | **50** | **864.00** | **864.00** | **864.00** | **864.00** |